**ಓ.ಎಸ್. ನಂ.42/2013 ಡಿ.ಡಬ್ಲೂ-2 ಹೆಸರು - ನಾಗರಾಜೇ ಅರಸ್ ಬಿ**

**ಸಾಕ್ಷಿಯನ್ನು ದಿನಾಂಕಃ 27/07/2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಕೆ.ಎಸ್.ಎಂ ವಾದಿ ಪರ ವಕೀಲರಿಂದಃ-**

ನಿಡಿ-13 ಮರಣ ಶಾಸನ ಪತ್ರವನ್ನು ದಿಃ18.10.2000 ರಂದು ಸುಂದ್ರಮ್ಮ ರವರು ಕುಮಾರಸ್ವಾಮಿ ರವರಿಗೆ ಬರೆದುಕೊಟ್ಟಂತಹ ಪತ್ರವಾಗಿರುತ್ತದೆ. ನಿಡಿ-13 ರಲ್ಲಿ ಸುಂದ್ರಮ್ಮನ ಗಂಡನ ಹೆಸರು ಹೊಳ್ಳೆಬಸಪ್ಪ ಎಂದು ನಮೂದು ಆಗಿದೆ. ಅವರ ವಯಸ್ಸು ಎಷ್ಟು ಎಂದು ನಮೂದು ಆಗಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ದಾಖಲಾತಿ ನೋಡಿ ಹೇಳುತ್ತೇನೆ ಎಂದು ನುಡಿಯುತ್ತಾರೆ. ನಿಡಿ-13 ರಲ್ಲಿ ಸುಂದ್ರಮ್ಮನಿಗೆ ಎಷ್ಟು ಜನ ಮಕ್ಕಳು ಎಂದು ನಮೂದು ಆಗಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವರಿಗೆ ಮಕ್ಕಳು ಇಲ್ಲ ಎಂದು ನುಡಿಯುತ್ತಾರೆ. ಕುಮಾರಸ್ವಾಮಿ ರವರು ಸುಂದ್ರಮ್ಮನ ಅಣ್ಣನ ಮಗ. ಸುಂದ್ರಮ್ಮ ಅಳಗಂಚಿ ಗ್ರಾಮದವರು. ಸುಂದ್ರಮ್ಮ ನಿಮಗೆ ಹೇಗೆ ಪರಿಚಯ ಎಂದು ಕೇಳಿದ್ದಕ್ಕೆ ಸಾಕ್ಷಿಯು ನನಗೆ ಅವರು ಪರಿಚಯವಿಲ್ಲ ಎಂದು ನುಡಿದು ಪತ್ರ ಬರೆಯುವ ದಿನವೇ ನಾನು ಅವರನ್ನು ನೋಡಿದ್ದು ಎಂದು ನುಡಿಯುತ್ತಾರೆ. ನನಗೆ ಸುಂದ್ರಮ್ಮನ ಪರಿಚಯ ಮಾಡಿಕೊಟ್ಟವರು ಪತ್ರ ಬರಹಗಾರರಾದ ಎ.ಎಲ್ ಚಿಕ್ಕಲಿಂಗಯ್ಯರವರು. ನನಗೆ ಸುಂದ್ರಮ್ಮನ ಪರಿಚಯ ಖುದ್ದಾಗಿ ಇರುವುದಿಲ್ಲ. ಕುಮಾರಸ್ವಾಮಿ ರವರು ಸುಂದ್ರಮ್ಮನ ಅಣ್ಣನ ಮಗ ಎನ್ನುವ ವಿಚಾರ ಕೂಡ ಅವರ ಹೇಳಿಕೆಯಿಂದ ಗೊತ್ತಾಗಿರುತ್ತದೆ. ನಿಡಿ-13 ಕ್ಕೆ ಪತ್ರ ಬರಹಗಾರರ ಕೋರಿಕೆಯಂತೆ ಸಾಕ್ಷಿದಾರನಾಗಿ ರುಜು ಮಾಡಿದ್ದೇನೆ. ಯಾವ ಕಾರಣಕ್ಕಾಗಿ ನಾನು ಮರಣ ಶಾಸನ ಪತ್ರವನ್ನು ತನ್ನ ಅಣ್ಣನ ಮಗ ಕುಮಾರಸ್ವಾಮಿಗೆ ಬರೆಯುತ್ತಿದ್ದೇನೆ ಎನ್ನುವ ವಿಚಾರವನ್ನು ಸುಂದ್ರಮ್ಮ ನನಗೆ ಖುದ್ದಾಗಿ ತಿಳಿಸಿಲ್ಲ.

ಮರುವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**